**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,**

**ಪೊನ್ನಂಪೇಟೆ.**

**ಸಿ.ಸಿ. ನಂ. 729/2024** **ಫ್ರಾ.ಸಾ – 8**

**ಚಾ.ಸಾ – 12**

**ದಿನಾಂಕಃ 17.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಮಂಜುನಾಥ್ ಪಿ ಎಸ್ |
| ತಂದೆಯ ಹೆಸರು | : | ಶಾಂತಪ್ಪ |
| ವಯಸ್ಸು | : | 44 ವರ್ಷ |
| ಉದ್ಯೋಗ | : | ಮುಖ್ಯ ಪೇದೆ |
| ವಾಸ ಸ್ಥಳ | : | ಕುಶಾಲನಗರ. |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ–**

ನಾನು 2019 ರಿಂದ 2025 ರ ತನಕ Madikeri CEN P.S. ನಲ್ಲಿ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. 30.06.2023 ರಂದು ಚಾಸಾ 22 ರವರು ಠಾಣೆಗೆ ಹಾಜರಾಗಿ ಮೊಬೈಲ್ retrieve ಮಾಡುವ ಸಂಬಂಧ ಪಂಚರ ಸಮಕ್ಷಮ ನೀಡಿದ್ದು ಅದರಲ್ಲಿ ಒಂದು ಕಪ್ಪು ಬಣ್ಣದ redmi mobile ಅನ್ನು ಠಾಣೆಯ aunt analayser ufed four pc ಗೆ ಆಳವಡಿಸಿ ನೋಡಲಾಗಿ ಅದು 21 ಭಾವಚಿತ್ರಗಳನ್ನು ತೋರಿಸಿದ್ದು ಅದರ ಮೇಲೆ software ಒಂದು ವರದಿ ನೀಡಿದ್ದು ಅದನ್ನು ತನಿಖಾಧಿಕಾರಿಗೆ ನೀಡಿರುತ್ತೇನೆ. ಈ ಮಹಜರ್ ಅನ್ನು 10.45 ರಿಂದ 01.00 ಗಂಟೆ ತನಕ ಮಾಡಲಾಯಿತು ಮತ್ತು ನಾನು ಸದರಿ ಮಹಜರ್ ಗೆ ಸಹಿ ಮಾಡಿರುತ್ತೇನೆ.

ಸಾಕ್ಷಿಗೆ ಪ್ರಾಥಮಿಕ ವಿಶ್ಲೇಷಣಾ ದತ್ತಾಂಶ ಮಾಡುವ ಸಮಯದಲ್ಲಿ ಮಹಜರ್ ಅನ್ನು ಜರುಗಿಸಿದ್ದು ಆ ಮಹಜರ್ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 35ಎಂದು ಸಹಿಯನ್ನು ನಿ ಪಿ 35(ಎ) ಎಂದು ಗುರುತಿಸಲಾಯಿತು. ಮಹಜರ್ ನಲ್ಲಿ 21 ಭಾವಚಿತ್ರಗಳ ದತ್ತಾಂಶಗಳನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ. ಹೆಚ್. ಎನ್ ವಕೀಲರಿಂದಃ**

ನಾನು ನನ್ನ ಸಾಕ್ಷ್ಯದಲ್ಲಿ ಹೇಳಿರುವಂತೆ ಯಾವುದೇ ಕ್ರಮ ಕೈ ಗೊಂಡಿಲ್ಲ ಎಂದರೆ ಸರಿಯಲ್ಲ. ನಾನು ಯಾವ ಮೊಬೈಲ್ , ಸಿಮ್ ಗಳನ್ನು ನೋಡುವುದಿಲ್ಲ ತಂದ ಮೊಬೈಲ್ ಅನ್ನು software ಹಾಕಿದರೆ ಅದೇ ವರದಿ ನೀಡುತ್ತದೆ. ನಾನು ಕೊಟ್ಟ ವರದಿ ಸುಳ್ಳಾಗಿರುತ್ತದೆ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ **ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/-

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ